ನವಸಾಕ್ಷರ ಪುಸ್ತಕ ಮಾಲೆ ೭೩

ಚೆನ್ನಿ ಶಾಲೆಗೆ ಸೇರಿದ್ದು

ಎಸ್. ಸಂಧ್ಯಾ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ—೭೩

ಚೆನ್ನಿ ಶಾಲೆಗೆ ಸೇರಿದ್ದು

ಎಸ್. ಸಂಧ್ಯಾ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ—೫೮೩ ೨೧೧

CHENNI SHALEGE SERIDDU: By S. Sandya. Published by The Director of Prasaranga, Kannada University, Hampi – 583 211, KARNATAKA.
First Impression 1994, Pp. ii + 26, Rs. 8.00

ಸಂಯೋಜನಾಧಿಕಾರಿ
ಡಾ|| ಎಚ್.ಎಸ್.ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ—೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ: ರೂ ೮.೦೦

ಮುದ್ರಕರು
ಅಭಿಮಾನಿ ಪ್ರಕಾಶನ
೯೬, ಡಾ.ರಾಜಕುಮಾರ್ ರಸ್ತೆ,
ರಾಜಾಜಿನಗರ,
ಬೆಂಗಳೂರು—೫೬೦ ೦೨೧

ಚೆನ್ನಿ ಶಾಲೆಗೆ ಸೇರಿದ್ದು

(ಎಂಟು-ಹತ್ತು ವರ್ಷದ ಚೆನ್ನಿ ಮತ್ತು ರಂಗಿ ಕಲ್ಲಾಟ ಆಡುತ್ತಾ ಒಬ್ಬರ ಹಿಂದೆ ಒಬ್ಬರು ಪ್ರವೇಶ. ಚೆನ್ನಿ ತಲೆಯ ಮೇಲೆ ಮೊಸರಿನ ಮಡಕೆ. ಚೆನ್ನಿ ಬಗ್ಗಿ ತನ್ನ ಕಲ್ಲನ್ನು ಎತ್ತಿಕೊಂಡು ರಂಗಿಯ ಕಲ್ಲಿನ ಮೇಲೆ ಒಗೆಯುತ್ತಾಳೆ.)

ಚೆನ್ನಿ : ಇಕ, ಈವಾಗ ನಿನ್ನಾಟ.

ರಂಗಿ : (ತನ್ನ ಕಲ್ಲನ್ನೆತ್ತಿ ಚೆನ್ನಿಯ ಕಲ್ಲಿಗೆ ಗುರಿಯಿಟ್ಟು ಹೊಡೆದು) ಇಕ, ಈವಾಗ ನಿಂದು.

ಚೆನ್ನಿ : (ತನ್ನ ಕಲ್ಲನ್ನು ರಂಗಿಯ ಕಲ್ಲಿಗೆ ಸರಿಯಾಗಿ ಹೊಡೆದು) ಹಾಂ! ನಾ ಗೆದ್ದೆ, ನೀ ಸೋತೆ! ಅಂಗಂದ್ರೆ ಈವಾಗ ನೀನು ನಂಜೊತೆ ಸಂತೆಗೆ ಬರಲೇಬೇಕು.

ರಂಗಿ : ಇಲ್ಲಿ ಕಣಮ್ಮಿ, ನಮ್ ಚಿಕ್ಕಿ ಬೈತಾಳೆ.

ಚೆನ್ನಿ : ಬಾರೆ, ನಾನೂ ನೀನೂ ಒಟ್ಟಿಗೆ ಸಂತೆಗೋಗಿ ಒಂದೇತಾವ ಒಂದೇ ಮರದ್ ತಳಗೆ ಕೂಕಂಡು ಸಂಜೆಗಂಟ ಮೊಸರು ಮಾರಾಣ. ಆಮೇಕೆ ಇಬ್ಬರೂ ನಾಕಾಣೆ ಬೆಂಡು-ಬತ್ತಾಸು, ನಾಕಾಣೆ ಕಳ್ಳೆಪುರಿ ತಕ್ಕಂಡು ದಾರಿ ಉದ್ದಕು ತಿಂದುಕೊಂಡು ಬಂದುಬಿಡನ.



ಚೆನ್ನಿ ಮತ್ತು ರಂಗಿಯ ಕಲ್ಲಿನಾಟ

ರಂಗಿ : ಹೋಗೇ, ನೀನು ನನ್ನ ಆಟದಲ್ಲಿ ಸೋಲಿಸಿದ್ದೀಯ. ಅದಿಕ್ಕೆ, ಅಗೋ ಅಲ್ಲಿ ಆ ಜಾಲಿ ಮರ ಐತಲ್ಲ, ಅಲ್ಲೀತಕ ಮಾತ್ರ ನಿನ್ನ ಜತೀಗೆ ಬತ್ತೀನಿ. ಆಮೇಕೆ ನೀನುಂಟು, ನಿನ್ ಮೊಸರು ಗಡಿಗೆ ಉಂಟು ಕಣಮ್ಮಿ.

ಚೆನ್ನಿ : ಬೇಕಾರೆ ನಿಂಗೆ ಸಂತೇಲಿ ಟೇಪೋ, ಬಳೇನೋ ಕೊಡುಸುತೀನಿ ಕಣೆ. ನಂಗೆ ಒಬ್ಬುಗೆ ಬೇಜಾರು, ಬಾರೇ...

ರಂಗಿ : ಉಹುಂ ನಿಂಗೆ ಒಬ್ಬುಗೆ ಬೇಜಾರೂಂದ್ರೆ ಮತೀಗಾ.. ಮತೀಗಾ... ರಾಜಕುಮಾರನ್ನ ನೆನಸಿಕೊ. ಅರಮನೇಂದ ಇಳಿದು ಬಂದು ನಿಂಜೊತೆ ಜಾತ್ರೆಗೆ ಬತ್ತನೆ.

ಹೋಗಲ್ಬೇಕು ಜಾತುರಿಗೆ। ಲಲ್ಲಾರೆ ಜಾಣೆ ।
ಹೋಗಲ್ಬೇಕು ದೇವರಿಗೆ

ಅಂತ ಹಾಡ್ತನೆ ಬೇಕಾರೆ ಕೈಕೈ ಇಡಕಂಡೇ ಓಗ್ರಿ. ಓ... ಓ... ಓ... ಓ, ಜಾಲಿ ಮರ ಬಂತು ನಾ ಒಂಟೆ. (ಹೋಗುತ್ತಾಳೆ)

ಚೆನ್ನಿ : (ಸಪ್ಪೆಮೋರೆ ಹಾಕಿಕೊಂಡು ನಿಧಾನವಾಗಿ ಹಾಡುತ್ತಾಳೆ)

ಹೋಗಲ್ಬೇಕು ಜಾತುರಿಗೆ। ಲಲ್ಲಾರೆ ಜಾಣೆ
ಹೋಗಲ್ಬೇಕು ದೇವರಿಗೆ।

(ಸ್ವಲ್ಪ ಹೊತ್ತಿನ ಮೇಲೆ) ಹೋಗೇ ರಂಗಿ, ನೀನು ಬರದಿದ್ರೆ ಬೇಡ, ನಾನು ರಾಜಕುಮಾರನ್ ಜತಿಗೇ ಸಂತೇಗೇನು, ಜಾತ್ರೆಗೂ ಓಗ್ತೀನಿ ಪಟ್ಟಣಕ್ಕೂ ಓಗ್ತೀನಿ...

ಚೆನ್ನಿ : (ಸ್ವಲ್ಪ ಹೊತ್ತಿನ ಮೇಲೆ ಕನಸಿನಲ್ಲಿ ಮಾತಾಡುತ್ತಿರುವವಳಂತೆ) ಇವತ್ತು ಈ ಮೊಸರನ್ನ ಮಾರಿದ ಮೇಲೆ ಎಂಟಾಣೆ ಲಾಭ ಬರುತ್ತೆ. ಅದರಾಗೆ ಬೆಂಡೂ ತಕಳಾಕಿಲ್ಲ,



ಮೊಸರು ಮಾರಲು ಹೊರಟಿರುವ ಚೆನ್ನಿ

ಬತ್ತಾಸೂ ತಕಳಾಕಿಲ್ಲ, ಕಳ್ಳೆಪುರಿನೂ ತಕಳಾಕಿಲ್ಲ. ಅವ್ವುಂಗೇಳಿ ನಾನೇ ಹುಂಡಿಗಾಕ್ಕತೀನಿ, ದಿವಸಕ್ಕೆ ಎಂಟಾಣೆ ಅಂದರೆ ವಾರುಕ್ಕೆ? (ಪಿಟಪಿಟ ತುಟಿ ಆಡಿಸಿ, ಕೈ ಬೆರಳುಗಳ ಮೇಲೆ ಎಣಿಸುತ್ತಾಳೆ) ಮೂರು ರುಪಾಯ್ ಎಂಟಾಣೆ! ವಾರುಕ್ಕೆ ಮೂರು ರುಪಾಯ್ ಎಂಟಾಣೆ ಆದ್ರೆ, ತಿಂಗಳಿಗೆ?... (ಪಿಟಪಿಟ ತುಟಿ ಆಡಿಸಿ, ಕೈ ಬೆರಳುಗಳ ಮೇಲೆ ಎಣಿಸಿ) ಅದನಾಲಕ್ ರುಪಾಯ್! ಅಬ್ಬಾ! ತಿಂಗಳಿಗೆ ಅದನಾಲಕ್ ರುಪಾಯ್ ಆದ್ರೆ ವರ್ಷಕ್ಕೆ? (ಎಷ್ಟು ಎಣಿಸಿದರೂ ತಿಳಿಯದೆ, ಕಡೆಗೆ,) ಅಬ್ಬಬ್ಬಾಂದ್ರೂ ಇನ್ನೂರ್ ಮುನ್ನೂರ್ ರುಪಾಯ್ ಆಗಬೋದು, (ಕನಸಿನಲ್ಲಿ ಕಳೆದು ಹೋಗಿರುವವಳಂತೆ) ಆವಾಗ ನಾನು ಈ ಹರಕಲು ಲಂಗನ ಕಿತ್ತು ಬಿಸಾಕುತೀನಿ.. ಸಿದ್ದನಳ್ಳಿ ಜಾತ್ರೇಲಿ ಜರತಾರಿ ಜಂಪರ್ ತರತೀನಿ... ಬೆಟ್ಟನಳ್ಳಿ ಸಂತೇಲಿ ಹಸುರು, ಕೆಂಪು, ಹಳದಿ, ನೀಲಿ.. ಎಲ್ಲ ಬಣ್ಣದ್ದು ಪಿಲಾಸ್ಟಿಕ್ ಬಳೆ ತಕತೀನಿ,... ಕಿವಿಗೆ ಜುಮುಕಿ, ಮೂಗುಗೆ ನತ್ತು... ಎಲ್ಲ ತಕತೀನಿ. ಕಣ್ಣಿಗೆ ಕಾಡಿಗೆ ಅಚ್‌ಕೊಂಡು, ಮಕಕ್ಕೆ ಪೌಡ್ರು ಬಳಕೊಂಡು, ಹಣೆಗೆ ರಂಗೋಲಿಯಂಗೆ ಚಾಂದ್ ಅಚ್‌ಕತೀನಿ.. ಆ ಟೆಂಟ್ ಸಿನುಮ್‌ದೊಳಗೆ ರಾಜಕುಮಾರ್ ಎಂಡತಿ ಆಗೋಳು ಇಟ್‌ಕಂಡಿದ್ದಳಲ್ಲ? ಅಂತಾ ಕೈ ಚೀಲ ತಕ್ಕಂಡು, ಈ ಕೈಗೆ ಇಂಗೆ ತಗಲಾಕ್ಕಂಡು, ಇಂಗೆ.. ವೈಯ್ಯಾರವಾಗಿ ಬೀಸ್ಕಂಡು ಬರ್ತಾ ಇರ್ತೀನಿ.. ಆವಾಗ ರಾಜಕುಮಾರ ಬರ್ತನೆ...

(ರಾಜಕುಮಾರ ಕುದುರೆ ಮೇಲೆ ಬರುವವನಂತೆ ಕುಣಿಯುತ್ತಾ, ಟೊಟಾ ಟೊಟಾ ಶಬ್ದಮಾಡುತ್ತಾ ಬರುತ್ತಾನೆ. ಚೆನ್ನಿ ಖುಷಿಯಿಂದ ತಾನೂ ಅವನ ಕುಣಿತದಲ್ಲಿ ಒಂದಾಗುತ್ತಾಳೆ)

ರಾಜಕುಮಾರ : ಹೋಗಲ್ಬೇಕು ಜಾತುರಿಗೆ | ಲಲ್ಲಾರೆ ಜಾಣೆ
ಹೋಗಲ್ಬೇಕು ದೇವರಿಗೆ||

ಚೆನ್ನಿ : (ಜಂಭದಿಂದ)
ಬರೀ ಕಾಲಲ್ ಬರೋಳಲ್ಲ
ಬಂಡಿ ಮೇಲೆ ಕೂರೋಳಲ್ಲ ||೨||
ಕುದ್ರೆ ಸಾರೋಟು ತರಿಸೋ | ಲಲ್ಲಾರೆ
ಕುದ್ರೆ ಸಾರೋಟು ತರಿಸೊ||

ರಾಜಕುಮಾರ : ನಿನ್ನ ನನ್ ರಾಣಿ ಮಾಡ್ಕೊತೀನಿ, ಬಾರೇ ನನ್‌ಜೊತೆ...

ಚೆನ್ನಿ : ಕುದ್ರೆ ಸಾರೋಟು ತರಿಸು; ನಾನು ಬರದಿದ್ರೆ ಕೇಳು.

ರಾಜಕುಮಾರ : ಕುದ್ರೆ ಸಾರೋಟು ಮಾತ್ರ ಯಾಕೆ, ಆನೆ ಅಂಬಾರಿನೂ ತರುಸ್ತೀನಿ, ಬಾರೆ ನನ್ ರಾಣಿ...

ಚೆನ್ನಿ : ಆವಾಗ ನನ್ನ ಏಳು ಸಮುದ್ರ, ಏಳು ಕೋಟೆ ಆಚೆ ಇರ ಊರಿಗೆ ಕರಕೊಂಡೋಗ್ತಿಯಾ? ಹಾಗಂತ ಮಾತು ಕೊಡು, ನಾನು ಬರದಿದ್ರೆ ಕೇಳು.

ರಾಜಕುಮಾರ : ಇಕ, ನನ್ನಾಣೆ! ಏಳು ಯೋಜನ ದೂರದ, ಏಳು ಸಮುದ್ರ, ಏಳು ಕೋಟೆ ಆಚೆ ಇರ ಊರಿಗೇ ಕರಕೊಂಡೋಗ್ತೀನಿ, ಮೊದಲಿಗೆ ದೇವರಿಗೆ ಓಗಣ, ಬಾರೆ ನನ್ನ ಚಿನ್ನ:

> ನಂಜನಗೂಡ್ಗೆ ಹೋಗ್ಲೇ ಬೇಕು |
> ಮಂಡೆನಾದ್ರು ಕೊಡ್ಲೆ ಬೇಕು || ೭ ||
> ದಿಂಡ್ರು ಸೇವೆ ಮಾಡಬೇಕು | ಲಲ್ಲಾರೆ ಜಾಣೆ
> ಬಾರೆ ನನ್ನ ಜೊತೆಯಾಗೆ ||

ಚೆನ್ನಿ : ಅಂಗಾರೆ ಇವಾಗ ಸದ್ಯಕ್ಕೆ ಏನೇನು ತಕಬಂದಿದೀಯ?

ರಾಜಕುಮಾರ : ಈವಾಗ

> ಇಪ್ಪತ್ತೊಂದು
> ತೆಂಗಿನಕಾಯಿ |
> ಹೊತ್ತುಕೊಂಡು ಬಾಳೆ ಹಣ್ಣು |
> ಶುದ್ಧವಾದ ಮಧುಗಿರಿಗೆ | ಲಲ್ಲಾರೆ ಜಾಣೆ
> ಬಾರೆ ನನ್ನ ಜೊತೆಯಾಗೆ ||

ಚೆನ್ನಿ : (ಕನಸನ್ನು ಬಿಡಿಸಿ ಹೇಳುವಂತೆ) ಜುಮುಕಿ-ಸರ ತಂದವನಾಂತ ಕೇಳುದ್ರೆ ತೆಂಗಿನಕಾಯಿ-ಬಾಳೆಹಣ್ಣು ತಂದವನಂತೆ! ಅದಿಕ್ಕೆ ನಾನು ನನ್ನ ವ್ಯಾನಿಟಿ ಬ್ಯಾಗನ್ನ ಇಂಗೆ ಬೀಸಿ, ಇಂಗೆ ಕೈ ತಿರುವಿ, ಇಂಗೆ...'ಬರೋದಿಲ್ಲ ಹೋಗೋ' ಅಂತೀನಿ.



ಬೀದಿಯಲ್ಲೇ ರಾಜಕುಮಾರನ ಕನಸು ಕಾಣುತ್ತಿರುವ ಚೆನ್ನಿ

(ತಕ್ಷಣ ತಲೆ ಮೇಲಿನ ಮಡಕೆ ದಬಾರ್ ಅಂತ ಕೆಳಕ್ಕೆ ಬಿದ್ದು ಒಡೆದು ಹೋಗುತ್ತದೆ)

(ರಾಜಕುಮಾರ ತಕ್ಷಣ ಮಾಯವಾಗುವಂತೆ ಓಡಿ, ಮರೆಯಾಗುತ್ತಾನೆ ಸೋರಿ ಹೋದ ಮೊಸರನ್ನ ಕಂಡು ಚೆನ್ನಿ ತತ್ತರಿಸಿ, ಬೆದರಿ ನಿಲ್ಲುತ್ತಾಳೆ. ಕೆಲಕಾಲ ಬಿಟ್ಟು)


ಚೆನ್ನಿ : ಹೋ...! ನನ್ನ ಮಡಕೆ...! ನನ್ನ ಮೊಸರು....! ಅಯ್ಯೋ...! ನಮ್ಮವ್ವ ಇನ್ನ ನಂಗೆ ಸರಿಯಾಗಿ ಉಯ್‌ತಳೇ... 'ಕಾಸು ಎಲ್ಲೆ ಚೆನ್ನಿ?' ಅಂತ ಊರಬಾಗ್ಲುತಾವನೇ ನಿಂತುಕೊಂಡು ಕೇಳತಳಲ್ಲ... ಆವಾಗ ನಾನು ಏನುತ್ರ ಹೇಳಲಿ? ಇನ್ನ ಸಂತೆ ತಾಕೇ ಓಗಿಲ್ಲ, ಇಂಗಿಂಗಾಯ್ತೂಂತ ದಿಟ ಏಳುದ್ರೆ ಇನ್ನ ಇಡಕಂಡು ಚಚ್ಚಾಕ್ತಳೆ (ಅಳುತ್ತಾ) ಊಂ... ಅಪ್ಪುಂಗೇಳಿ ಬಾಸುಂಡೆ ಬರಹಂಗೆ ಬಾರಸ್ತಳೆ.. ಊಂ.. ಹಾಳು ಕನ್ಸು! ನನಗೆ ಕೇಡು ತಂದಿಕ್ಕಿತು. ಊಂ... ಊಂ... (ಅಳುತ್ತಾ ಮುಖವನ್ನು ಮಂಡಿಗಳ ನಡುವೆ ಬಚ್ಚಿ ಕೂರುತ್ತಾಳೆ)



ಚೆನ್ನಿಯ ಒಡೆದ ಮಡಕೆ

(ಅಷ್ಟರಲ್ಲಿ ಸ್ಕೂಲ್ ಮೇಡಂ ಕೈಯಲ್ಲಿ ಪುಸ್ತಕ, ಬಗಲಲ್ಲಿ ಚೀಲ ಹಾಕಿಕೊಂಡು ಅದೇ ದಾರಿಯಾಗಿ ಹೋಗುತ್ತಿರುತ್ತಾಳೆ. ಚೆನ್ನಿಯನ್ನು ಕಂಡು ನಿಲ್ಲುತ್ತಾಳೆ)

ಮೇಡಂ : ಯಾರದು? ಒಂಟಿ ಹುಡುಗಿ... ಅಳುತ್ತಾ ಕೂತಿದ್ದಾಳೆ.. ಓ, ಚೆನ್ನೀ?



ಅಳುವ ಚೆನ್ನಿಯನ್ನು ಕಂಡು ಮೇಡಂ ಹತ್ತಿರ ಬಂದರು

ಚೆನ್ನಿ : (ಕಣ್ಣೆತ್ತಿ ನೋಡದೆ ಅಳುತ್ತಾ)ಊಂ...

ಮೇಡಂ : ಯಾಕಮ್ಮ ಚೆನ್ನಿ ಅಳ್ತಿದೀಯ? ಅರೆ, ಮೊಸರುಗಡಿಗೆ ಒಡೆದುಹೋಗಿದೆ...

ಚೆನ್ನಿ : (ಅಳುತ್ತಾ)ಊಂ...

ಮೇಡಂ : ಕೈ ಜಾರಿ ಬಿದ್ದೋಯ್ತಾ?

ಚೆನ್ನಿ : (ಅಳುತ್ತಾ) ಊಂ...

ಮೇಡಂ : (ನಸುನಕ್ಕು) ಏಳು, ಮೇಲೇಳು ಚೆನ್ನಿ.. ಅಷ್ಟಕ್ಕೆಲ್ಲ ಅಳಬಾರದು.. ಕೈ ಜಾರಿ ಬಿದ್ದರೆ ಯಾರು ಏನು ಮಾಡಕ್ಕಾಗುತ್ತೆ? ಬಾ, ನಾನೂ ನಿಮ್ಮ ಮನೆ ಕಡೆಗೇ ಹೋಗ್ತಿದೀನಿ (ಏಳಿಸಲು ಪ್ರಯತ್ನಿಸುತ್ತಾಳೆ)

ಚೆನ್ನಿ : ಇಲ್ಲ ಮೇಡಮ್ಮ ನಾನು.. ನಾನು.. ಮನೆಗೆ ಓಗಕ್ಕಿಲ್ಲ

ಮೇಡಂ : ಯಾಕೇಳು?

ಚೆನ್ನಿ : ಮತಿಗಾ, ಮತಿಗಾ... ಮೊಸರುಗಡಿಗೆ ಒಡೆದೋಯ್ತು, ಮೊಸ್ರು ಚೆಲ್ಲೋಯ್ತು ಅಂತ ನಮ್ಮವ್ವಂಗೆ ಅಯ್ಯಂಗೆ ಗೊತ್ತಾಗೋದ್ರೆ... ಇನ್ನ ನಂಗೆ... ನಂಗೆ... ಬಾಸುಂಡೆ ಬರಹಂಗೆ ಚಟೀರ್! ಚಟೀರ್! ಅಂತ ಬಾರುಸ್ತರೆ.. ಊಂ...


ಮೇಡಂ : ಅದಿಕ್ಕೆ?

ಚೆನ್ನಿ : ಅದಿಕ್ಕೆ ನಾನು ಮನೆ ಕಡೆಗೇ ಓಗಕಿಲ್ಲ. ಎಲ್ಲಾದ್ರೂ ಕೆರೇನೊ ಬಾವಿನೋ ನೋಡ್ಕತೀನಿ... ಊಂ...

ಮೇಡಂ : ಅಯ್ಯೋ ಶಿವನೆ! ಇಂತಾ ಮಾತೆಲ್ಲ ನಿನ್ನಷ್ಟು ಚಿಕ್ಕವಳಿಗೆ ಯಾರು ಹೇಳಿಕೊಟ್ರು?

ಚೆನ್ನಿ : ಈವಾಗ ನಾನೇನಾರ ಬರಿಗೈಲಿ ಮನೇಗೆ ಓದೇಂದ್ರೆ ನನ್ನ ನಮ್ಮಯ್ಯ ನಮ್ಮವ್ವ ಅಂಗೇ ಬಯ್ಯದು.'ಮೊಸ್ರು ಗಡಿಗೆ ಒಡ್ದಾಕಂಡು' ಮನೆತಾಕೆ ಯಾಕೆ ಬಂದೆ ಗತಿಗೆಟ್ಟ ಮುಂಡೆ? ಅಂಗೆ ಯಾವುದಾರ ಕೆರೆನೊ ಬಾವಿನೊ ನೋಡ್ಕಬಾರದಿತ್ತಾ?' ಅಂತ.

ಮೇಡಂ : ಹಾಗೆಲ್ಲ ಅನ್ನಬಾರದು ಚೆನ್ನಿ, ನಿಮ್ಮವ್ವ ಅಯ್ಯ ಜೊತೆ ನಾನೇ ಮಾತಾಡ್ತೀನಿ. ಇದೊಂದು ಸಲ ಪಾಪಾಂತ ಬಿಟ್ಟುಬಿಡಿ, ಚೆನ್ನಿ ಒಳ್ಳೆ ಹುಡ್ಗಿ, ಜಾಣೆ ಅಂತ ಹೇಳ್ತೀನಿ ಬಾ, ಏಳು.



ಮೇಡಂ ನಿಂಗಿಯನ್ನು ಸಮಾಧಾನಪಡಿಸಿದರು

(ಅಷ್ಟರಲ್ಲಿ ಹದಿನೆಂಟು ವರ್ಷದ ನಿಂಗಿ ಸೊಂಟದಲ್ಲಿ ಮಗುವನ್ನು ಎತ್ತಿಕೊಂಡು ಪ್ರವೇಶ)

ಮೇಡಂ : ಅರೆ, ನಿಂಗಿ! ಏನು ನಿಂಗಿ ಸಮಾಚಾರ? ಮಗೂನ ಎತ್ತಿಕೊಂಡು ತಿರ್ಗಾಡ್ತಿದೀಯ... ಹುಶಾರಾಯಿತಾ ನಿನ್ ಮಗು ಜ್ವರ?

ನಿಂಗಿ : (ಗಡಿಬಡಿಯಿಂದ) ಊ ಮೇಡಮ್ಮ, ಮಗಿ ಕಾಯ್ಲೆಯೇನೊ ವಾಸಿ ಆಯಿತ್ರ. ಈವಾಗ ನಂಗೆ ಯಾಕೊ ಜೊರ ಬಂದೈತೆ. ಗಂಟಲು ಭಗಭಗ ಉರೀತ್ಯೆತೆ... ಕಿವಿ ತಕನೂ ಕಿತ್‌ಬರಹಂಗೆ ಬ್ಯಾನೆ...ಇಷ್ಟು ಸಾಲ್ದೂಂತ ನಮ್ಮತ್ತೆ ಕಾಟ ಕಣ್ ಮೇಡಮ್ಮ. ನನ್ ಮಗನ್ನ ನುಂಗ್ ಕಂಡ್ ಬುಟ್ಟೆ, ನುಂಗ್‌ಕಂಡ್ ಬುಟ್ಟೇಂತ ನನ್ನ ಗೊಯ್ಯುಕತಳೆ. (ಅಳುತ್ತಾ) ಈ ಕೂಸೂ ನಿನ್ನಂತುದೇಯ ಇದು ಉಟ್ಟಿದ್ದು ಗಳಿಗೆ ಸರ್‍ಯಾಕಿಲ್ಲ. ಅಂತ... ಅಂತ...

ಮೇಡಂ : ಅಂತ ಏನ್ ಮಾಡೂಂತಾಳೆ ನಿಮ್ಮತ್ತೆ?

ನಿಂಗಿ : ಯಪ್ಪಾ!

ಮೇಡಂ : (ಮೊದ ಮೊದಲು ಭಯಗೊಂಡಂತಾದರೂ ಅವಳಿಗೆ ಧೈರ್ಯ ಕೊಡಲು ಮುಂದೆ ಬಂದು) ಹಾಗೆ ಆಗೋಕ್ಕೆ ನಾವೆಲ್ಲ ಬಿಡ್ತೀವಾ? ನಿಮ್ಮತ್ತೆಗೆ ಕಾನೂನು ಅಂದ್ರೆ ಏನೂಂತ ಗೊತ್ತಿಲ್ಲಾಂತ ಕಾಣುತ್ತೆ.

ಚೆನ್ನಿ : ಅಲ್ಲ ಮೇಡಮ್ಮ, ಈ ಕೂಸೂ ಹೆಣ್ಣು, ಅದರ ಅಜ್ಜಿನೂ ಹೆಣ್ಣು. ಅಂಗಿದ್ರೂ ಇದು ಸಾಯಿಲ್ಲಾಂತ ಎಂಗೆ ಏಳ್ತಳೆ ಇವರ ಅತ್ತೆ?

ಮೇಡಂ : ಹೌದು ಚೆನ್ನಿ. ಕೆಲವು ಜನ ಬರೀ ವಯಸ್ಸಲ್ಲಿ ದೊಡ್ಡೋರಾಗಿರ್ತಾರೆ. ಇನ್ನೂ ಕೆಲವು ಜನ ಚಿಕ್ಕವರಾದರೂ ಅವರ ಬುದ್ದೀಲಿ ದೊಡ್ಡತನ ಇರತ್ತೆ. ನಿಂಗಿ, ಅಳಬೇಡ. ನೀನೇ ಅತ್ರೆ ನಿನ್ನ ಕೂಸಿಗೆ ಸಮಾಧಾನ ಮಾಡೋರ್‍ಯಾರು? ನೀನು ಮೊದ್ಲು ನಿನ್ ಮಗೂನ ಸಮಾಧಾನ ಮಾಡು... ಹೊಟ್ಟೆ ಹಸೀತಿರ್‌ಬೋದು. ಹಾಲು ಕುಡಿಸಿದ್ಯಾ ನಿಂಗಮ್ಮ...?

ನಿಂಗಿ : ನೆನ್ನೆ ಕೂಲಿ ಕಾಸೆಲ್ಲ.... ಆಯಮ್ಮನೇ ಕಿತ್‌ಕೊಂಡಿತು ಕಣಮ್ಮ. ರಾತ್ರಿಯಿಂದ ಗಂಜಿನೇಕಾಸಿಲ್ಲ. ಇನ್ನ ಹಾಲ್ನ ಎಲ್ಲಿಂದ ತರ್‍ಲಮ್ಮ?

ಚೆನ್ನಿ : ಪಾಪ! (ಅಳುವ ಮಗುವಿನ ಬಳಿ ಹೋಗಿ) ಲೆ ಲೆ ಲೆ ಲೆ ಲೆ... ಅಳ್‌ಬೇಡ್ವೆ.... (ಚಪ್ಪಾಳೆ ತಟ್ಟಿ) ಇಲ್ಲಿ ನೋಡು, ಇಲ್ಲಿ ನೋಡು... ಚೀ ಕಳ್ಳಿ! ಚೀ ಕಳ್ಳಿ! ನಿಂಗವ್ವ, ನಿನ್ ಮಗ ಈವಾಗ ನಕ್ತಾ ಐತೆ. ನೋಡು...

ನಿಂಗಿ : (ನಗುತ್ತಿರುವ ತನ್ನ ಮಗುವನ್ನು ನೋಡಿ) ನನ ಕಂದಮ್ಮ, ನಿನ್ ಮೊಗದಾಗೆ ಇಂತಾ ನಗು ನೆನ್ನೆ ದಿವ್ಸದಿಂದ ಬಂದಿಲ್ವಲ್ಲೆ. ನನ್ನ ಚಿನ್ನಮ್ಮ...

ಚೆನ್ನಿ : ಇದ್ರೆಸ್ರು ಚಿನ್ನಮ್ಮನಾ?

ಮೇಡಂ : ಹೂಂನಮ್ಮ.

ಚೆನ್ನಿ : (ಖುಷಿಯಿಂದ) ನಾನು ಚೆನ್ನಿ! ಇವಳು ಚಿನ್ನಿ!

(ಮಗುವನ್ನು ಎತ್ತಿಕೊಳ್ಳಲು ಹವಣಿಸುತ್ತಾಳೆ. ನಿಂಗಿ ಮಗುವನ್ನು ಅವಳ ತೊಡೆ ಮೇಲೆ ಮಲಗಿಸುತ್ತಾಳೆ. ಇದೇ ಸಮಯದಲ್ಲಿ)

ಮೇಡಂ : ಅಂದ್ರೆ ನೀನು ಕೂಲಿ ಮಾಡಿದ್ದು, ಸಂಪಾದನೆ ಮಾಡಿದ್ದು ಎಲ್ಲ ನಿಮ್ಮತ್ತೆ ಹೊಟ್ಟೆಗೇ ಹೋಗುತ್ತಾ?

ನಿಂಗಿ : ಹೂಂನ್ರ.

ಮೇಡಂ : ನೆನ್ನೆ ಎಷ್ಟು ಬಂದಿತ್ತು ಕೂಲಿ?

ನಿಂಗಿ : ನೆನ್ನೆ ದೀವ್ಸ... ಮೂವತ್ತೆಂಟು ರುಪಾಯ್.

ಮೇಡಂ: ನೀನು ಅಷ್ಟುನ್ನೂ ಮನೆಗ್ಯಾಕೆ ತೊಗೊಂಡೋದೆ ನಿಂಗಿ? ನಿಮ್ಮತ್ತೆ ಹೀಗೆ ಮಾಡ್ತಳೇಂತ ಗೊತ್ತಿರಲಿಲ್ವ?

ನಿಂಗಿ : ಎಲ್ಲಿ ಮಡೀಕಳ್ಳಿ ಏಳ್ರಿ ಮೇಡಮ್ಮ?

ಮೇಡಂ: ಕಾಸು ಕೈಗೆ ಬಂದ ಕೂಡಲೆ ನಿಂಗೆ, ನಿನ್ ಮಗೂಗೆ ಏನೇನು ಬೇಕೊ ಅದನ್ನ ಮೊದಲು ತೆಗೆದಿಟ್ಟುಕೊ. ಆಮೇಲೆ ಉಳಿದಿದ್ದುನ್ನ ಹುಂಡಿಗಾಕಿ

ಇಟ್ಕುಕೊ. ಆ ಹುಂಡೀನ ನನ್ನ ಹತ್ತಿರಾನೋ... ಇನ್ನು ಯಾರಾದರೂ ನಂಬಿಕೆ ಇರೋರ ಹತ್ತಿರಾನೋ ಇಟ್ಟಿರು.

ನಿಂಗಿ : ಏನೋ ಅಂತಾ ಯಾವಾರ ಎಲ್ಲ ನಂಗೆ ಗೊತ್ತಿಲ್ರ...

ಮೇಡಂ: ಅದಿಕ್ಕೆ ನಿಮ್ಮತ್ರೆ ಅಂತಾ ಜಾಣರು ನಿಮ್ಮುನ್ನ ಮೇಯಿಸೋದು.
(ಮಗು ಮತ್ತ ಅಳುತ್ತದೆ. ಚೆನ್ನಿ 'ಲ ಲ ಲ ಲೆ' ಅನ್ನುತ್ತಾ ಆಡಿಸಲು ಪ್ರಯತ್ನಿಸುತ್ತಾಳೆ)

ಮೇಡಂ: (ಕೈಗೆ ಎರಡು ರೂಪಾಯಿ ಕೊಡುತ್ತಾ) ಎಲ್ಲಿ ನಿಂಗಮ್ಮ, ತೊಗೊ ಈ ಕಾಸು. ಮೊದಲು ಅಂಗಡೀಗೆ ಹೋಗಿ ಸ್ವಲ್ಪ ಹಾಲು ತೊಗೊಂಡು ಮಗೂಗೆ ಕುಡಿಸು. ಒಂದು ಬನ್ನು ತೊಗೊಂಡು ನೀನೂ ತಿನ್ನು. ಆಮೇಲೆ ಕೂಲಿ ಮಾಡಕ್ಕೆ ಹೋಗು.

ಚೆನ್ನಿ : ನಿಂಗಮ್ಮನಿಗೆ ಜೊರ ಅಂತೆ ಮೇಡಮ್ಮ. ಮತೀಗಾ ಕೂಲಿಗೆ ಎಂಗೆ ಹೋಗ್ತಳೆ? ಪಾಪ.

ಮೇಡಂ : ಹಂಗಾದ್ರೆ ಇನ್ನೂ ಒಂದು ಕೆಲ್ಸ ಮಾಡು. ಬನ್ ಜತೆಗೆ ಒಂದು ಜ್ವರದ ಮಾತ್ರೇನೂ ತೊಗೊ....

016167

ನಿಂಗಿ : (ಬೇಸರದಿಂದ) ಏ, ಒಗ್ರವ್ವ, ಯಾವುದೂಂತ ಮಾಡ್ಲಿ. ಮಗೀಗೆ ಹಾಲೇ ತರಲಾ, ನಂಗೆ ಈ ಕಡೆ ಬನ್ನು ಆ ಕಡೆ ಮಾತ್ರೆ... ಇವೇ ಗೋಳು ಮಾಡುತ್ತಾ ಇದ್ರೆ ಕೂಲಿಗೆ ಹೊತ್ತಾಗುತ್ತೆ...

ಮೇಡಂ : ಹಂಗಂದ್ರೆ ಹೆಂಗೆ ನಿಂಗಿ? ಇವತ್ತು ನೀನು ಉಪವಾಸ ಇದ್ದು ಕೆಲಸ ಮಾಡುದ್ರೆ ನಾಳೆಗೆ ಜ್ವರ ಜಾಸ್ತಿ ಆಗಿರಲ್ವ? ನಾಳೆ ಹೆಂಗೆ ಕೆಲಸ ಮಾಡ್ತೀಯ? ಹಾಗೇನಾದ್ರೂ ನೀನು ಮಲಗಿಕೊಂಡ್ರೆ ನಿನ್ ಕೂಸನ್ನ ಯಾರು ನೋಡಿಕೊಳ್ಳೋರು.... ಇಲ್ಲಾಂದ್ರೆ ಅದುನ್ನ ನಿಮ್ಮತ್ತೆ ಹೆಂಗೆ ನೋಡ್ಕೊತಳೆ ಗೊತ್ತಿಲ್ವಾ?

ನಿಂಗಿ : ಬುಡ್ತೂನ್ನಿ ಮೇಡಮ್ಮ...!

ಚೆನ್ನಿ : ಅದಿಕ್ಕೆ ನೀನು ಸುಮ್ಕೆ ಮೇಡಮ್ಮ ಏಳ್ದಂಗೆ ಮಾಡು. ಅವರು ತುಂಬಾ ತಿಳಕೊಂಡಿದ್ದಾರೆ.

ಮೇಡಂ : ಈಗ ಇಷ್ಟು ಮಾಡು: ನೀನು ಇವತ್ತು ಮಾಡಬೇಕಾಗಿರೊ ಕೆಲಸಗಳೇನು ಅಂತ ನೆನಪು ಮಾಡಿಕೊ.

ನಿಂಗಿ : ನೆಪ್ ಮಾಡ್ಕೊಂಡೆ.

ಮೇಡಂ : ಈವಾಗ, ಯಾವ್ ಯಾವ್ ಕೆಲ್ಸನ ಬೇಗ ಮಾಡಬೇಕು ಅಂತ ನೀನೇ ನಿರ್ಧಾರ ಮಾಡು.

ನಿಂಗಿ : ಈವಾಗ್ಲಾ? ಈವಾಗ, ಮೊದಲು ನನ್ ಮಗೀಗೆ ಹಾಲು....

ಮೇಡಂ : ಹಾಲಿನ ಅಂಗಡೀಲೆ ಬನ್ನು ಸಿಗ್ತದ್ದಲ್ಲೆ ನಿಂಗಮ್ಮ!

ನಿಂಗಿ : ಓ. ಹೌದಲ್ಲ. ನಂಗೊಂದು ಬನ್ನು...

ಚೆನ್ನಿ : ಮತೀಗ ದಾರೀಲೆ ಆಸ್ಪತ್ರೇನೂ ಐತಲ್ಲ. ಅಲ್ಲೆ ನಿಂಗೆ ಜ್ವರದ್ ಮಾತ್ರೆ ಸಿಗಕಿಲ್ವ?

ಮೇಡಂ : ಸರ್ಯಾಗಿ ಹೇಳ್ದೆ ಚೆನ್ನಿ. ಮೂರು ಕೆಲ್ಸ ಒಂದೇ ಏಟಿಗೆ ಆಯ್ತಲ್ಲ? ಅಲ್ಲಿಂದ ನೀನು ಸೀದ ಕೂಲಿ ಮಾಡೋ ಜಾಗಕ್ಕೆ ಹೋಗು...

ನಿಂಗಿ : ಎಷ್ಟು ಸಲೀಸಾಗಿ ಬುಡುಸ್ ಬುಟ್ಟೆ ಬಿಡವ್ವ ನನ್ ಗೋಜಲುನ. ಇಕ, ನಾನು ಒಂಟೆ. ತಾರೆ ಚೆನ್ನಿ ನನ್ನ ಮಗೀನ....

ಚೆನ್ನಿ : ಇನ್‌ಮೇಕೆ ನಿನ್ ಕೆಲ್ಸಗಳನ್ನ ಹಿಂಗೇ ಸಲೀಸಾಗಿ ಬಿಡುಸ್ಕತಿನೀಂತ ಮಾತು ಕೊಡು, ಚಿನ್ನೀನ ನಿನ್ನ ಹತ್ರ ಕೊಡ್ತೀನಿ.

ನಿಂಗಿ : ಆಯ್ತು ಕಣೆ ಚೆನ್ನಿ. ತತಾ... (ಹೋಗುತ್ತಾಳೆ)

ಚೆನ್ನಿ : ಮೇಡಮ್ಮ, ನಮ್ಮವ್ವನೂ ಅವರತ್ತೆ ಥರನೆ. ಎಷ್ಟು ಕಾಟ ಕೊಡ್ತಳೆ.

ಮೇಡಂ : ಇಲ್ಲ ಚೆನ್ನಿ, ನಿಂಗಿ ಅತ್ತೆಗೆ ಸೊಸೆ ಕಂಡ್ರೆ ಆಗಲ್ಲ. ಹಳೇ ಕಾಲದವರ ಥರ ಅತ್ತೇಂದ್ರೆ ಸೊಸೆಗೆ ಕಾಟ ಕೊಡಲೇ ಬೇಕೂ ಅನ್ನೊ ಥರದಾಕೆ. ಅದೂ ಅಲ್ದೆ ಈ ಸಮಾಜದಲ್ಲಿ ಹೆಣ್ಣು ಮಕ್ಕಳು ಅಂದ್ರೆ ತಂದೆ ತಾಯಿಗಳಿಗೆ ತುಂಬಾ ಕಷ್ಟ ಕೊಡೋವರು ಅನ್ನೋ ಕೆಟ್ಟ ನಂಬಿಕೆ.

ಚೆನ್ನಿ : ಯಾಕೆ? ಹೆಣ್ಣು ಮಕ್ಕಳೂಂದ್ರೆ ಕೆಟ್ಟವರೂಂತ ಅಂದು ಕೊಂಡಿದ್ದಾರಾ?

ಮೇಡಂ : ಹಾಗಲ್ಲ, ಹೆಣ್ಣು ಮಕ್ಕಳನ್ನ ಸಾಕೋದು, ಮದುವೆ ಮಾಡಿಕೊಡೋದು ಇವೆಲ್ಲ ತಂದೆ ತಾಯಿಗಳಿಗೆ ಭಾರ ಅನ್ನುವಂಥ ನಂಬಿಕೆ ನಮ್ಮ ಸಮಾಜದಲ್ಲಿದೆ.

ಚೆನ್ನಿ : ಆದರೆ ಅಂಗೇ ಅಲ್ಲವಾ ನಮ್ಮೂರಾಗೂ ನಡಿಯೋದು? ಆ ಸಿದ್ದಮ್ಮನ ಮದುವೆ ಆಯ್ತಲ್ಲ, ಅದ್ರಾಗೆ ಗಂಡು-ಹೆಣ್ಣು ಇಬ್ರುಗೂ ಮದುವೆ ಆಯ್ತು ಮೇಡಮ್ಮ. ಆದ್ರೂ ದೊಡ್ಡೋರೆಲ್ಲ ಮಾತಾಡಿಕೊತಿದ್ದರು... ಮದುವೆ ಕರ್ಚು ಪೂರ್ತ ಹೆಣ್ಣಿನ ಕಡೇವ್ರುದೂಂತ. ಹಂಗ್ಯಾಕೆ ಮೇಡಮ್ಮ?

ಮೇಡಂ : ಅಲ್ಲೇ ಇರೋದು ವಿಷ್ಯ. ಮೊದಲನೇದಾಗಿ ಮದುವೆ ಮುಂಜಿಗೇಂತ ಸಾವಿರಾರು-ಲಕ್ಷಾಂತರ ರೂಪಾಯಿ ಖರ್ಚು ಮಾಡೋದು ಬೇಕೇ ಇಲ್ಲ. ಹೆಣ್ಣಿನ ಕಡೆಯವರಾಗಲಿ ಗಂಡಿನ ಕಡೆಯವರಾಗಲಿ, ಯಾಕೆ ದುಂದು ವೆಚ್ಚ ಮಾಡಬೇಕು, ನೀನೆ ಹೇಳು ಚೆನ್ನಿ.

ಚೆನ್ನಿ : ಹೌದಲ್ವಾ ಮೇಡಮ್ಮ? ಅದೇ ದುಡ್ಡಿದ್ದಿದ್ರೆ ಈ ನಿಂಗಮ್ಮನಂತೋರ ಕಷ್ಟ ಎಷ್ಟು ಕಡಿಮೆ ಆಗ್ತಿತ್ತು ಅಲ್ವ?

ಮೇಡಂ : ಎಲ್ಲರೂ ತಮಗೆ ಬೇಕಾಗಿರುವಷ್ಟು ಮಾತ್ರ ಇಟ್ಟುಕೊಂಡಿದ್ದರೆ ಇಷ್ಟು ವಿಪರೀತ ಆಗುತ್ತಾ ಇರಲಿಲ್ಲ. ನನ್ನ ಮಗಳ ಮದುವೆಗೆ ಇಷ್ಟು ಲಕ್ಷ ಖರ್ಚು ಮಾಡಿದೆ. ಅಷ್ಟು ಲಕ್ಷ ಖರ್ಚು ಮಾಡಿದೇಂತ ಹೇಳಿಕೊಳ್ಳೋಕೆ ಅಪ್ಪ ಅಮ್ಮಂದಿರಿಗೆ ಚೆನ್ನಾಗಿರುತ್ತೆ. ಆದರೆ...

ಚೆನ್ನಿ : ಮೇಡಮ್ಮ ಮತೀಗಾ ಆವತ್ತು ಆ ಸಿದ್ದಮ್ಮನ ಗಂಡನ ಕಡೇವ್ರು ಏನೇಳ್ತಿದ್ರು ಗೊತ್ತಾ? ಏನೂಂದ್ರೆ... ಮತೀಗಾ...

ಮೇಡಂ : ಯಾ ವಿಷಯ?

ಚೆನ್ನಿ : ಅದೇ ಮೇಡಮ್ಮ, ಮತೀಗಾ ಸಿದ್ದಮ್ಮನ ಗಂಡನಿಗೆ ಮೊದಲು ಯಾರೊ ಹೆಣ್ ಕೊಡ್ತಿವೀಂತ ಬಂದಿದ್ರಂತೆ... ಮೂವತ್ ಸಾವಿರಾಂತೆ... ವರ... ವರೋಪಕಾರ... ವರೋಪಕಾರ (ತಡವರಿಸಿ) ಅಂತಾದೇನೊ ಏಳ್ತಿದ್ದರು ಮೇಡಮ್ಮ.

ಮೇಡಂ: ಇಲ್ಲ ನಿಂಗಿ, ಅದು 'ವರೋಪಚಾರ'...

ಚೆನ್ನಿ : 'ವರೋಪಕಾರ', 'ವರೋಪಚಾರ' ವಿರುದ್ಧ ಪದಗಳಾ ಮೇಡಮ್ಮ?

ಮೇಡಂ: (ಅರ್ಥ ತುಂಬಿ ನಗುತ್ತಾ) ಒಂದು ವಿಧದಲ್ಲಿ ವರೋಪಚಾರ ವರೋಪಕಾರ ವಿರುದ್ಧ ಅರ್ಥಗಳನ್ನ ಕೊಡುತ್ತದೆ.

ಚೆನ್ನಿ : ಹೇಗೆ?

ಮೇಡಂ : ಹೇಗೇಂದ್ರೆ ಹೀಗೆ. ವರೋಪಚಾರ ಅಂದರೆ ಮದುವೆ ಗಂಡಿಗೆ ಹೆಣ್ಣಿನ ಕಡೆಯವರು ಸುರಿಯುವ ಹಣ-ಸತ್ಕಾರ. ವರೋಪಕಾರ ಅಂದರೆ ವರನಿಗೆ ಉಪಕಾರ. ಅಂದ್ರೆ ಸಹಾಯ ಮಾಡೋದು. ವರೋಪಚಾರ ಮಾಡೋದ್ರಿಂದ ಗಂಡುಗಳಿಗೆ ಉಪಕಾರ ಖಂಡಿತಾ ಆಗುವುದಿಲ್ಲ. ಬದಲಿಗೆ ಅವನಿಗೆ ಜಂಬ ಜಾಸ್ತಿ ಆಗುತ್ತೆ. ಅವಳು ಹೆಚ್ಚು ಹೆಚ್ಚು ಬಳಲುತ್ತಾಳೆ.

ಚೆನ್ನಿ : ಬಲಳು.... ಬಲಳು.... ಬಳಲುತ್ತಾಳೆ.... ಅಂದ್ರೆ?

ಮೇಡಂ : ಅಂದ್ರೆ ಸುಸ್ತಾಗ್ತಾಳೆ.

ಚೆನ್ನಿ : ಓ, ಅದಿಕ್ಕೇನಾ ಸಿದ್ದಮ್ಮನಿಗೆ ಅವಳ ಗಂಡ ಹೊಡಿಯೋದು....? ಹಾಂ...! ಈ ಮಡಕೆ ಚೂರು ಕಾಲಿಗೆ ಎಟ್‌ಕೊತು ಕಣ್ ಮೇಡಮ್ಮ.

ಮೇಡಂ : ಎಲ್ಲಿ, ತೆಗೀತೀನಿ.

ಚೆನ್ನಿ : ಮೇಡಮ್ಮ...., ನಾನು.... ನಾನು.... ತಿಂಗಳಿಗೊಂದುಸಲನಾದ್ರೂ ಮಡಕೆ

ಒಡೆದು ಹಾಕ್ತನೇ ಇರ್‍ತೀನಿ. ಸಂತೆಗೋಗ್ತಾ ಓಗ್ತಾ ದಾರೀಲಿ ರಾಜಕುಮಾರನ ಜತೀಗೆ ಮಾತಾಡಿಕೊಂಡು ಓಗ್ತಾ ಇರ್‍ತೀನಿ. ಅವಾಗ ಇಂಗೆಲ್ಲ ಆಗ್ ಬುಡುತ್ತೆ... ಅದಿಕ್ಕೆ ನಮ್ಮವ್ವ ಒಂದೊಂದಿವ್ಸ "ಇವಳು ವಾರುಕ್ಕೆ ಮೂರುಪಾಯ್ ಲಾಭ ತರೋದೂ ಸಾಕು, ವಾರುಕ್ಕೆ ಹನ್ನೆರಡಾಣೆ ಮಡಕೆ ಒಡೆದಾಕೋದೂ ಸಾಕೂಂತ ಬೈತಿರ್‍ತಾಳೆ.

ಮೇಡಂ : ಮತ್ತೆ, ಇನ್ನೊಂದು ಸಲ ನೀನು ಹೀಗೆ ಮಾಡಬಾರದು. ಹುಷಾರಾಗಿರಬೇಕು.

ಚೆನ್ನಿ : ಮತಿಗಾ, ಮತಿಗಾ, "ಇನ್ನೊಂದು ಸಲ ಮಡಕೆ ಒಡ್ದಾಕ್ಕಂಡು ಬಂದ್ರೆ ನಿಂಗೆ ಆ ಇದ್ದಿಲಂಗಡಿ ಈರುನ್ ಕೊಟ್ಟು ಮದ್ವೆ ಮಾಡ್ತಿನೀಂತ" ವೋದವಾರ ಏಳಿತ್ತು ನಮ್ಮವ್ವ ಇನ್ನ ಅಂಗೆ ಮಾಡ್ತಳೆ. ಊಂ.... ಊಂ... (ಶುರು ಮಾಡುತ್ತಾಳೆ. ಮುಖ ಮುಚ್ಚಿ ಕೂತುಬಿಡುತ್ತಾಳೆ)

ಮೇಡಂ : ಅಯ್ಯೊ ಹುಚ್ ಹುಡುಗಿ. ಇವಾಗ ನಿನ್ನಂತಾ ಸಣ್ ಸಣ್ ಹುಡುಗೀರಿಗೆ ಮದುವೆ ಮಾಡಂಗಿಲ್ಲಾಂತ ಕಾನೂನು ಬಂದಿದೆ.

ಚೆನ್ನಿ : (ಕೂತಲ್ಲೆ ತಲೆ ಎತ್ತಿ) ಕಾನೂನೂಂದ್ರೆ?

ಮೇಡಂ: ಕಾನೂನೂಂದ್ರೆ ಇದು: ನೋಡು, ಇವಾಗ ನಿನ್ನಂತಾ ಸಣ್ ಸಣ್ ಹುಡುಗೀರಿಗೆ ಮದುವೆ ಮಾಡಂಗಿಲ್ಲಾಂತ ಹೇಳುದ್ನಲ್ಲ ಅದು ಒಂದು ಕಾನೂನು. ಹಂಗೇನಾರ ನಿಂಗೆ ಈವಾಗ ಮದುವೆ ಮಾಡುದ್ರೂಂತ ಇಟ್ಟುಕೊ. ಅದೇನಾದ್ರು ಪೋಲಿಸ್ನೋರಿಗೆ ಗೊತ್ತಾದ್ರೆ, ಅವರು ನಿಮ್ಮಪ್ಪ, ಅಮ್ಮನ್ನ, ಗಂಡಿನ ಅಪ್ಪ, ಅಮ್ಮನ್ನ ಜೈಲಿಗೆ ಹಾಕ್ತರೆ. ಗೊತ್ತಾಯ್ತಾ? ಈಗ, ಮೇಲಕ್ಕೇಳು. ಬಿಸಿಲು ಹೆಚ್ಚಿಗೆ ಆಗ್ತಾ ಇದೆ. ಬಾರಮ್ಮ ಚೆನ್ನಿ.

ಚೆನ್ನಿ : ಉಹುಂ...

ಮೇಡಂ: ಅಗೊ ನೋಡು, ರಂಗಿ ಬರ್‍ತಿದ್ದಾಳೆ. ಬಾ ರಂಗಿ. ನೋಡು ನಿನ್ನ ಗೆಳತಿ ಕತೇನ. ಮಡಕೆ ಒಡೆದು ಹೋಯಿತೂಂತ ಮನೆಗೇ ಹೋಗಲ್ಲಾಂತಳೆ. (ರಂಗಿ ಚೀಲ ತಗಲಾಕಿಕೊಂಡು ಬರುತ್ತಾಳೆ)

ರಂಗಿ : ಹೌದೇನೆ ಚೆನ್ನಿ? ಸರಿ ನಡಿ, ನೀನೂ ನಂಜೊತೆ ಶಾಲೆಗೆ ಬಂದ್ ಬಿಡು. ಅಲ್ವ ಮೇಡಮ್ಮ?

ಮೇಡಂ : (ಸಂತೋಷದಿಂದ) ಸರಿಯಾಗಿ ಹೇಳಿದೆ ರಂಗಿ. ಹೌದು ಚೆನ್ನಿ, ನೀನೂ ನಮ್ಮ ಜೊತೆ ಶಾಲೆಗೆ ಬಾ. ಎಲ್ಲ ಮಕ್ಕಳ ಜೊತೆ ಅಕ್ಷರ ಕಲೀಬಹುದು.

ಚೆನ್ನಿ : (ಕ್ರಮೇಣ ತಲೆ ಎತ್ತಿರುತ್ತಾಳೆ) ಅದುನ್ ಕಲಿತ್ರೆ ಆಮೇಕೇನಾಗುತ್ತೆ?

ಮೇಡಂ : ಆಮೇಲೆ ಓದೋದು ಕಲೀಬಹುದು....

ಚೆನ್ನಿ : ಓದದ್ ಕಲಿತ್ರೆ ಆಮೇಕೇನಾಗುತ್ತೆ?

ಮೇಡಂ : ಆಮೇಲೆ ಬರಿಯಕ್ಕೆ ಕಲೀಬೋದು

ಚೆನ್ನಿ : ಬರಿಯಕ್ಕೆ ಕಲಿತ್ರೆ ಆಮೇಕೇನಾಗುತ್ತೆ?

ಮೇಡಂ : ಆಮೇಲೆ ಮಾತಾಡಕ್ಕೆ. ಚರ್ಚೆ ಮಾಡಕ್ಕೆ ಕಲೀಬೋದು.

ಚೆನ್ನಿ : ಅದನ್ನೂ ಕಲಿತ್ರೆ ಆಮೇಕೇನಾಗುತ್ತೆ?

ಮೇಡಂ : ನೀನು ಇನ್ನೂ ಜಾಣೆ ಆಗಿದ್ರೆ ಮುಂದುಕ್ಕೆ ಇಂಗ್ಲಿಷೂ, ಹಿಂದೀ, ಇನ್ನೂ, ಬೇರೆ ಬೇರೆ ಭಾಷೆ ಕಲೀಬೋದು...

ರಂಗಿ : ಬರಿಯಕ್ಕೆ, ಓದಕ್ಕೆ, ಮಾತಾಡಕ್ಕೆ, ಚರ್ಚೆ ಮಾಡಕ್ಕೆ.... ಎಲ್ಲ ಕಲೀಬೋದು ಕಣೆ ಚೆನ್ನಿ.

ಚೆನ್ನಿ : ಆಮೇಕೇನಾಗುತ್ತೆ ಮೇಡಮ್ಮ? ಆವಾಗ ನಮ್ಮವ್ವ ನಮ್ಮಯ್ಯ ನನಗೆ ಬಾಸುಂಡೆ ಬರಹಂಗೆ ಚಟೀರ್ ಚಟೀರ್ ಅಂತ ಹೊಡಿಯೋದಿಲ್ಲವಾ?

ರಂಗಿ : ಇಲ್ಲ ಕಣೆ.

ಮೇಡಂ : ಹುಚ್ಚಿ! ನೀನು ಆವಾಗ ದೊಡ್ಡ ಮನುಷಿ ಅನ್ನುಸುಕೊಂತೀಯ. ಆವಾಗ ಜನ ನಿನ್ನ ಬಗ್ಗೆ ಏನಂತರೆ ಗೊತ್ತಾ?



ಮೇಡಂ ಮತ್ತು ಚೆನ್ನಿ ಹಾಗೂ ರಂಗಿ

ಚೆನ್ನಿ : ಏನಂತರೆ?

ಮೇಡಂ : "ಅಬ್ಬಾ, ಚೆನ್ನೀನಾ? ಅವಳು ಬಿಡಿರಪ್ಪ, ವಿದ್ಯಾವಂತೆ!" ಅಂತರೆ. ನೀನು ಊರಲ್ಲಿ ಹೋಗೋವಾಗ, ದಾರೀಲಿ ಹೋಗೋರೆಲ್ಲ ನಿನ್ನ ನೋಡಿ, "ನಮಸ್ಕಾರ ಮೇಡಂ" ಅಂತಾರೆ. ನೀನು ಮೊದ್ಲು ಹೋಗ್ಲೀಂತ ಪಕ್ಕ ಸರಿದು ಜಾಗ ಮಾಡಿಕೊಡ್ತರೆ.... ಭಯ, ಭಕ್ತಿ ತೋರುತ್ತಾರೆ... ಗೌರವ ತೋರುಸ್ತರೆ.

ಚೆನ್ನಿ : ಅಂಗಾರೆ ನಮ್ಮವ್ವ ನಮ್ಮಯ್ಯ ನನಗೆ ಇನ್‌ಮೇಕೆ ಹೊಡಿಯಾಕಿಲ್ವ?

ಮೇಡಂ : ಇಲ್ಲ, ಹೊಡಿಯೋಲ್ಲ.

ರಂಗಿ : ನಾನೇಳಿಲ್ಲವಾ 'ಇಲ್ಲ ಕಣೆ' ಅಂತ? ಅದು ಬಿಟ್ಟು ಗೌರವ ತೋರುಸ್ತರೆ...

(ನಂಬದಂತೆ ಚೆನ್ನಿ ಮೇಡಂ ಮುಖ ನೋಡುತ್ತಾಳೆ)

ಮೇಡಂ : ಹೌದು ಚೆನ್ನಿ.

ಚೆನ್ನಿ : ನನ್ನೊಬ್ಬಳಿಗೇನಾ? ನಮ್ಮಯ್ಯ ನಮ್ಮವ್ವಂಗೂನಾ?

ಮೇಡಂ : ನಿನಗೂ ನಿಮ್ಮಯ್ಯ, ನಿಮ್ಮವ್ವಂಗೂ, ಮನೇಲಿರೊ ಎಲ್ರುಗೂ ಗೌರವ ತೋರುಸ್ತರೆ.

ರಂಗಿ : "ಅಬ್ಬ! ಚೆನ್ನಿ ತಂದೆ ಬರ್ತಿದಾರೆ. ದಾರಿ ಬಿಡ್ರೋ" ಅಂತರೆ. "ಅಬ್ಬ, ಚೆನ್ನಿ ತಾಯಿ ಬರ್ತಿದಾರೆ. ದಾರಿ ಬಿಡ್ರೋ", ಅಂತರೆ...

ಚೆನ್ನಿ : ಮತ್ಯಾಕೆ ರಂಗಿ ನಿಮ್ಮ ಚಿಕ್ಕಿ ನಿಂಗೆ ಬೈತಳೇಂತ ಯಾವಾಗ್ಲೂ ಗೋಳಾಡ್ತಿರ್ತೀಯ? ನೀನು ಶಾಲೆಗೆ ಹೋಗೋದು ಅವಳಿಗೆ ಇಷ್ಟ ಇಲ್ವ.

ಮೇಡಂ : ರಂಗಿ ಚಿಕ್ಕಮ್ಮ ಓದು-ಬರಹ ಕಲಿತಿಲ್ಲ. ತಾನು ಕಲಿತಿಲ್ಲಾಂತ ಒಬ್ಬೊಬ್ಬರಿಗೆ ಒಂದೊಂದು ಸಲ ಆ ಥರ ಸಿಟ್ಟು ಬರ್ತಿರತ್ತೆ. ಏನು ಮಾಡೋದು ಚೆನ್ನಿ. ಒಬ್ಬೊಬ್ಬರಿಗೆ ಶಾಲೆಗೆ ಹೋಗೋಕೆ ತುಂಬಾ ಇಷ್ಟ ಇರತ್ತೆ, ಆದ್ರೆ ಏನೇನೋ ಕಾರಣದಿಂದ ಹೋಗಕ್ಕೆ ಆಗಿರಲಿಲ್ಲ. ನಾವು, ಅಂದರೆ ಶಾಲೆಗೆ ಹೋಗಿರುವವರು, ಅಂಥವರ ಮನಸ್ಸನ್ನು ಅರ್ಥ ಮಾಡಿಕೊಳ್ಳಬೇಕು.

ರಂಗಿ : ಹಂಗಂತ ನಮ್ ಚಿಕ್ಕಿ ಜತೆ ಮನೇಲೇ ಕೆಲ್ಸ ಮಾಡಿಕೊಂಡು ಇದ್‌ಬಿಡಲಾ?

ಚೆನ್ನಿ : ಹಾಗಲ್ಲ. ಮನೆ ಕೆಲಸಕ್ಕೆ ನೀನು ಚಿಕ್ಕಮ್ಮಂಗೆ ಸಹಾಯ ಮಾಡಲೇಬೇಕು. ಜೊತೆಗೆ ಓದು-ಬರಹ ಕಲೀಬೇಕು. ಹಂಗೆ ಅಲ್ವ ಮೇಡಂ.

ಮೇಡಂ : ಅಷ್ಟೇ ಅಲ್ಲ. ಈವಾಗ ದೊಡ್ಡೋರು, ಚಿಕ್ಕೋರು, ವಯಸ್ಸಾದೋರು, ಮುದುಕರು.... ಯಾವ ವಯಸ್ಸಿನವರೇ ಆಗಲಿ ಶಾಲೆಗೆ ಹೋಗಿ ಅಕ್ಷರ ಕಲೀಬಹುದು. ನೀನು ನಿಮ್ಮ ಚಿಕ್ಕಿಗೆ ಈ ವಿಷಯ ಹೇಳಿ ಅವಳನ್ನು ಶಾಲೆಗೆ

ಸೇರಿಕೊಳ್ಳೋಕೆ ಒಪ್ಪಿಸು.

ರಂಗಿ : (ಖುಷಿಯಿಂದ) ಹಂಗಾರೆ ನಮ್ ಚಿಕ್ಕಿ ನಂಗೆ ಇನ್ನಮೇಲೆ ಬೈಯಾಕಿಲ್ಲ!

ಚೆನ್ನಿ : ನಮ್ಮವ್ವ ನಮ್ಮಯ್ಯನೂ ಇನ್ ಮೇಕೆ ನಂಗೆ ಬೈಯಾಕೂ ಇಲ್ಲ, ಹೊಡಿಯಾಕೂ ಇಲ್ಲ!

ಮೇಡಂ : ಬನ್ನಿ ಮತ್ತೆ ಶಾಲೆಗೆ ಹೊತ್ತಾಯ್ತು. ಬೇಗ ಬೇಗ ಹೋಗೋಣ.

ರಂಗಿ : (ಹಿಂದೆ ಉಳಿದ ಚೆನ್ನಿಯನ್ನು ಕಂಡು) ಮತ್ಯಾಕೆ ಚೆನ್ನಿ ಅಲ್ಲೇ ನಿಂತೆ, ಕಂಬದ ಥರ?

ಚೆನ್ನಿ : ಅದೆಲ್ಲ ಸರಿ ಕಣೆ, ಆದ್ರೆ ಒಂದ್ ಮಾತು. ನಾನು ಶಾಲೆಗೆ ಬರೋದಿಕ್ಕೆ ನಮ್ಮವ್ವ ನಮ್ಮಯ್ಯನ್ನ ಒಪ್ಪಿಸೋರು ಯಾರು?


ಮೇಡಂ : (ಧೈರ್ಯ ಕೊಡುವಂತೆ) ನಾನೇ ಹೇಳ್ತೀನಿ.

ಚೆನ್ನಿ : "ಚೆನ್ನಿ ಶಾಲೆಗೆ ಸೇರಿಕೋತಾಳೆ. ಅವಳಿಗೆ ಅಲ್ಲಿ ಒಂಜೊತೆ ಇಸ್ಕೂಲ್ ವೀನೀಫಾರಮ್ಮು, ಪುಸ್ಕ, ದಿವಸಾ ಮದ್ಯಾನ ಉಪ್ಪಿಟ್ಟು.... ಎಲ್ಲ ಪುಕ್ಸಟ್ಟೆ ಕೊಟ್ಟು, ಜತೆಗೆ ಒಂದು ರೂಪಾಯ್ ಕಾಸೂ ಕೊಡ್ತರೆ" ಅಂತ ನೀವೇ ಅವರಿಗೆ ಏಳ್ತೀರಾ?

ಮೇಡಂ : ಖಂಡಿತಾ ಹೇಳ್ತೀನಿ. ಬಾ. ಆದ್ರೆ ನೀನು ಶಾಲೆಗೆ ಸೇರುದ್ರೆ ಇವೆಲ್ಲ ಕೊಡ್ತರೇಂತ ಹೇಗೆ ಗೊತ್ತು? ರಂಗಿ ಹೇಳುದ್ಲಾ?

ರಂಗಿ : ಇಲ್ಲಪ್ಪ. ದೇವರಾಣೆಗೂ ನಾನು ಹೇಳಿಲ್ಲ.

ಚೆನ್ನಿ : ಇಲ್ಲ ಮೇಡಮ್ಮ. ನಮ್ಮವ್ವನೇ ಏಳುತ್ತಿರುತ್ತೆ. ಒಂದೊಂದು ದಿವಸ ಮನೇಲಿ ತಿನ್ನಕ್ಕೆ ಏನೂ ಇರಕಿಲ್ಲ. ಆವಾಗ ನಮ್ಮಯ್ಯನ್ ತಾವ ಇಂಗೆ ಏಳ್‌ತಿರತ್ತೆ. 'ಮನೇಲಿ ತಿನ್ನಕ್ಕೇನೂ ಇಲ್ಲ. ಇವಳನ್ನು ಇಸ್ಕೂಲುಗಾದ್ರೂ ಹಾಕುದ್ರೆ ಇವಳ ಹೊಟ್ಟೆಪಾಡು ಏಗೋ ನಡೆದಂಗಾಗುತ್ತೆ. ಈವಾಗ ಇಸ್ಕೂಲಲ್ಲಿ ತಿಂದುಕೊತಾಳೆ. ಆಮೇಕೆ ಅವಳೇ ಬೇಕಾದರೆ ದುಡಿದುಕೊತಾಳೆ" ಅಂತ.



ಚೆನ್ನಿಯನ್ನು ಶಾಲೆಗೆ ಸೇರಿಸಿದರೆ ಹಣ ಬರುತ್ತದೆಂದು ತಾಯಿ ಹೇಳಿದರು

ಮೇಡಂ : ಹೌದು ಚೆನ್ನಿ, ಈಗಿನ ಕಾಲದಲ್ಲಿ ಓದು ಬರಹ ಕಲಿತಿದ್ದರೇ ಒಳ್ಳೇದು. ಇಲ್ಲಾಂದ್ರೆ ಜನ ನಿನ್ನ 'ಕ್ಯಾರೆ' ಅನ್ನಲ್ಲ. ನಿನ್ನ ಹಂಗೆ ಈ ಊರಲ್ಲಿರೋ ಎಲ್ಲ ಮಕ್ಕಳು ಶಾಲೆಗೆ ಸೇರ್ತಿವೀಂತ ಮುಂದೆ ಬಂದ್ರೆ ನಮ್ಮ ದೇಶ ಉದ್ಧಾರ ಆಗೋದ್ರಲ್ಲಿ ಅನುಮಾನನೇ ಇಲ್ಲ. ನಮ್ಮ ದೇಶ ಉದ್ಧಾರ ಆಗಬೇಕೂಂದರೆ ನಮ್ಮ ಹಳ್ಳಿ ಜನರೆಲ್ಲ-ಗಂಡಸರು, ಹೆಂಗಸರು, ಮಕ್ಕಳು, ಮುದುಕರು, ಎಲ್ಲ- ವಿದ್ಯಾವಂತರಾಗಬೇಕು. ಅಕ್ಷರ ಕಲೀಬೇಕು. ಮಾತಾಡಕ್ಕೆ, ಚರ್ಚೆ ಮಾಡಕ್ಕೆ ಕಲೀಬೇಕು. ಆವಾಗ್ಲೇ ನಮ್ಮ ಸಮಾಜ ಸುಧಾರಿಸೋದು. ದೇಶ ಮುಂದುವರಿಯೋದು. ಜನಕ್ಕೆ ತಿಳಿವಳಿಕೆ ಬಂದರೆ ವಿಚಾರ ಮಾಡೋಕೆ ಬಂದರೆ ಅದು ದೇಶದ ಪಾಲಿಗೆ ನಿಧಿ ಇದ್ದಂತೆ.

ಚೆನ್ನಿ : ಆಮೇಕೇನಾಗುತ್ತೆ?

ಮೇಡಂ : ಆಮೇಕೆ ನೀನು ಕೆಲಸಕ್ಕೆ ಸೇರಿಕೋಬಹುದು. ದುಡ್ಡು ಸಂಪಾದನೆ ಮಾಡಬಹುದು.

ರಂಗಿ : ವಾಲೆ, ಜುಮುಕಿ, ವಡವೆ, ಬಣ್ಣಬಣ್ಣದ ಬಟ್ಟೆ ತೊಗೋಬಹುದು. ಅಲ್ವ ಮೇಡಂ?

ಮೇಡಂ : ಹೌದು.

ರಂಗಿ : ಮನೆ ತುಂಬಾ ತರತರಾ ಸಾಮಾನು ಕೊಂಡುಕೊಬಹುದು.

ಚೆನ್ನಿ : ಆಮೇಕೆ?

ಮೇಡಂ : (ಚೆನ್ನಿಯ ತೀರದ ದಾಹ ಕಂಡು ಸಂತೋಷದಿಂದ) ಚೆನ್ನಿ, ಅಕ್ಷರ ಕಲಿತೋರೆಲ್ಲ ನಿನ್ನಷ್ಟು ಚೆನ್ನಾಗಿ ಆಲೋಚನೆ ಮಾಡಿದರೆ ಎಷ್ಟು ಚೆನ್ನಾಗಿರುತ್ತೆ. ಅಕ್ಷರ ಕಲಿತಮೇಲೆ ಇಷ್ಟೆಲ್ಲ ಅನುಕೂಲ ಮಾಡಿಕೊಳ್ಳೋಕೆ ಸಾಧ್ಯ ಅಂತ ಹೇಳಿದರೂ ನಿನಗೆ ಸಮಾಧಾನ ಆಗ್ತಾ ಇಲ್ಲ. ಅಲ್ವಾ?

ರಂಗಿ : ಚೆನ್ನಿ, ನಿಂಗೆ ಇಷ್ಟೆಲ್ಲಾ ಸಿಕ್ಕಮೇಲೂ ಇನ್ನೂ ಏನು ಬೇಕೆ?

ಚೆನ್ನಿ : ನಂಗೆ ಮತಿಗಾ... ಮತಿಗಾ... ಕನಸಿನ ರಾಜಕುಮಾರ ಬೇಕು. ನಮ್ಮಪ್ಪ ಅಮ್ಮನಂಗೆ ನಾನೂ ಅವನು ಜಗಳಾನೇ ಆಡಬಾರ್ದು. ಒಂದೊಂದಿವಸ ನಮ್ಮಪ್ಪ ನಂಗೆ ಬಾಸುಂಡೆ ಬರಹಂಗೆ ಬಡೀತರೆ. ನನ್ ಕನಸಿನ ರಾಜಕುಮಾರ ಹಂಗೆಲ್ಲ ಬಡಿಯೋದೂ ಇಲ್ಲ, ಹೊಡಿಯೋದೂ ಇಲ್ಲ. ನನ್ನ ರಾಜಕುಮಾರ ನನ್ನ ತುಂಬ ಪಿರೀತಿ ಮಾಡ್ತನೆ. ರಾಜಕುಮಾರ ಸಿಗ್ತನೇಂದ್ರೆ ಮಾತ್ರ ನಾನು ಅಕ್ಷರ ಕಲೀತೀನಿ.

ರಂಗಿ : (ಸಿಟ್ಟನಿಂದ) ಹೊಗೆಲೇ ಹೋಗು. ಇವಳು ಅಕ್ಷರ ಕಲಿತರೆ ಅವನ್ಯಾವನೊ ರಾಜಕುಮಾರ ಸಿಗಬೇಕಂತೆ! ನೋಡಿ ಮೇಡಮ್ಮ ಅವಳು ತಿಕ್ಕಲಿ ಥರ ಮಾತಾಡ್ತಾಳೆ. ಈ ವೈಂಕ್ಲಿ ಚೆನ್ನೀನ ಹುಡುಕಿಕೊಂಡು ಆ ಚಿನ್ನದಂಥಾ ಅರಮನೆ ಬಿಟ್ಟು ಬರ್ತನಾ ರಾಜಕುಮಾರ?

ಮೇಡಂ : ಹಾಗಲ್ಲ ರಂಗಿ. ರಾಜಕುಮಾರ ಅಂದ್ರೆ, ಬರೀ ರಾಜಕುಮಾರ ಅಂತ ಅಲ್ಲ.

ಅದು ಅವಳ ಕನಸುಗಳಿಗೆ ಇನ್ನೊಂದು ಹೆಸರು. ಅವಳೇ ಹೇಳುದ್ನಲ್ಲ ಅವಳ ರಾಜಕುಮಾರ ಹೊಡಿಯೋದೂ ಬಡಿಯೋದು ಏನೂ ಕೆಟ್ಟದ್ ಮಾಡಲ್ಲ ಅಂತ. ಅಂದರೆ ಅದು ಅವಳ ಕನಸುಗಳ ಲೋಕ ಅಂತ ಅರ್ಥ. ಓದಿ, ಬುದ್ಧಿ ಜಾಸ್ತಿ ಮಾಡಿಕೊಂಡರೆ ನಾವು ನಮ್ಮ ಕನಸುಗಳನ್ನು ನನಸು ಮಾಡಿಕೊಳ್ಳಬಹುದೂಂತ ಅವಳ ಮಾತಿನ ಅರ್ಥ. ಆವಾಗ್ಲೇ ನಾವು ನಿಜವಾದ ಅರ್ಥದಲ್ಲಿ 'ವಿದ್ಯಾವಂತರು' ಅನ್ನುಸ್ಕೊತೀವಿ.

ಚೆನ್ನಿ : ಆದ್ರೆ ಬುದ್ಧಿ ಜಾಸ್ತಿ ಮಾಡಿಕೊಂಡರೆ ಕನಸುಗಳನ್ನು ಹೇಗೆ ನಿಜ ಮಾಡ್ಕೊಳ್ಳೋದು ಮೇಡಮ್ಮ?

ಮೇಡಂ : ಬುದ್ಧಿ ಶಕ್ತಿ ಜಾಸ್ತಿ ಆಯ್ತೂಂದ್ರೆ ಕನಸನ್ನ ನನಸು ಮಾಡಿಕೊಳ್ಳೋದು ಹೇಗೇಂತ ನಿನಗೇ ಗೊತ್ತಾಗುತ್ತೆ. ಆವಾಗ ಬರೀ ಓದೋದೂ, ಬರಿಯೋದು ಮಾತ್ರ ಅಲ್ಲ, ಸುತ್ತಮುತ್ತ ಜನ ನೋಡಿ ತಿಳವಳಿಕೆ ಜಾಸ್ತಿ ಮಾಡ್ಕೋತೀಯ. ಬೇರೇವ್ರಿಗೆ ತಿಳವಳಿಕೆ ಕೊಡೋವಷ್ಟು ಜಾಣೆ ಆಗ್ತೀಯ.

ಚೆನ್ನಿ : ಹೂಂ ಕಣೆ ರಂಗಿ, ಈವಾಗ ತಾನೆಯ ಮೇಡಮ್ಮ ಆ ನಿಂಗಮ್ಮಂಗೆ ಎಷ್ಟು ಚೆನ್ನಾಗಿ ಬುದ್ಧಿ ಹೇಳಿಕೊಟ್ಟು ಕಳಿಸಿದರೂಂತೀಯ. (ತಕ್ಷಣ ಏನೋ ಹೊಳೆದಂತಾಗಿ) ಮೇಡಮ್ಮ, ಮೇಡಮ್ಮ, ಆವಾಗ ನಾನು ಮತೀಗಾ ಈ ವಾಲೆ, ಈ ಬಳೆ, ಈ ಸರ, ಈ ಜರತಾರಿ ಲಂಗ-ಜಂಪರ್ ಇವ್ಯಾವು ಕೊಂಡುಕೊಳ್ಳಲ್ಲ. ಅದ್ರು ಬದಲೀಗೆ ನಿಂಗಮ್ಮನ ಥರದವರಿಗೆ, ಅವಳ ಕೂಸಿನ ಥರದವರಿಗೆ ಬೇಕಾಗಿರೋದನ್ನ ಕೊಡುಸ್ತೀನಿ.

ಮೇಡಂ : ಸರ್‍ಯಾಗಿ ಹೇಳ್ದೆ. ನೀನು ರಂಗಿ, ನೀನೇನು ಮಾಡ್ತಿಯಾ?

ರಂಗಿ : ನಾನೂ ಇನ್ನ ಮೇಲೆ ಒಳ್ಳೆ ಕನಸು ನೋಡಕ್ಕೆ ಕಲೀತೀನಿ. (ಎಲ್ಲ ನಗುತ್ತಾರೆ)

ಮೇಡಂ : ಬನ್ನಿ ಈಗ. ಶಾಲೆಗೆ ಹೊತ್ತಾಯಿತು.

ಚೆನ್ನಿ : ತಡೀರಿ ಮೇಡಮ್ಮ. ನಾನೊಂದು ಹಾಡೇಳ್ತೀನಿ.

ಶಾಲೆಯ ಸವಿಯೂಟ ಪಾಠ ತಿನಿಸೆನಗೆ



ಚೆನ್ನಿಯೂ ಸಹ ಶಾಲೆಗೆ ಸೇರಿದಳು

ವಿಜ್ಞಾನ ಹಪ್ಪಳ
ಗಣಿತನೆ ಸಂಡಿಗೆ||
ಸಮಾಜಶಾಸ್ತ್ರ ಅನ್ನುವುದೆ ಅನ್ನ ನಮಗೆ || ಶಾಲೆಯ||

ರಂಗಿ : ನಾನೂ ಸೇರಿಸಲಾ ಪದನಾ?

ಚೆನ್ನಿ : ಓಹೋ

ರಂಗಿ : ಇಂಗ್ಲೀಷೇ ಪಲ್ಯ
ಕನ್ನಡವೆ ಸಾರು
ಸಂಸ್ಕೃತ ಅನ್ನುವುದೆ ಮೊಸರು ನಮಗೆ || ಶಾಲೆಯ||

ಚೆನ್ನಿ : ಬನ್ನಿ ಬನ್ನಿ. ಶಾಲೆಗೆ ಹೊತ್ತಾಗುತ್ತೆ.

* * *

ಕನ್ನಡ ವಿಶ್ವವಿದ್ಯಾಲ
ಟ್ಟಿದವರೆಗೆ ಉತ್ತಮ
ಹಾಗೂ ಉಪಯುಕ್ತ
ಠ್ಯಪುಸ್ತಕ ರಚನಾ
ವಿಭಾಗ'ವನ್ನು ತೆರೆ
ಠ್ಯಪುಸ್ತಕ ರಚನೆ
ಮಾಡಬೇಕೆಂದು ಚಿ
ನವಸಾಕ್ಷರರಿಗಾಗಿ
ಪುಸ್ತಕ ಬರೆಸುವ
ವಹಿಸಿಕೊಟ್ಟರು.
ವಿಶ್ವವಿದ್ಯಾಲಯವು
ಖ್ಯಾತ ಲೇಖಕರನ್ನು,
ಭಾಷಾತಜ್ಞರನ್ನು, ಶಿ
ಲ್ಲರ ಅಭಿಪ್ರಾಯ,
ಸಲಹೆ, ಸಹಕಾರಗಳ
ಮುದ್ರಣ ವಿನ್ಯಾಸ,
ಚಿತ್ರಗಳ ಮಹತ್ವ,
ನೇಕ ಸಲ ಚರ್ಚಿಸಿ
ಯೋಜನೆಯನ್ನು ಅ

ನವಸಾಕ್ಷರರಿಗಾಗಿ
ಪ್ರಕಟವಾಗಿರುವ
ಪುಸ್ತಕಗಳನ್ನೆಲ್ಲ
ಭಾಷಾತಜ್ಞರಿಂದ
ಪರಿಶೀಲಿಸಲಾಯಿತು
ಸಿಕೊಂಡು ಅವರಿಗೆ
ಕಮ್ಮಟಗಳನ್ನು ನ
ತ ಆಯ್ದ ಜಿಲ್ಲೆ,
ತಾಲ್ಲೂಕುಗಳಿಗೆ ಕಳ
ವವರಿಂದ ಅದರ
ಗುಣದೋಷಗಳ ಬ
ವಿಶ್ವವಿದ್ಯಾಲಯದ
ಗಣಕಯಂತ್ರದಲ್ಲಿ
ಾಯಕರು ನೀಡಿದ್ದ
ಮಾಹಿತಿಗಳನ್ನೆಲ್ಲ
ಣವಾಗಿ ವಿಷಯದ
ಆದ್ಯತೆಗಳನ್ನು ನಿಧ
ಲೇಖಕರು ನಮ್ಮ
ವಿಶ್ವವಿದ್ಯಾಲಯದ
ರೂಪ ಕೊಟ್ಟರು.
ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು